ಆನಂದ ವಿ. ಶೇಟ್, ಒಸಲಕೊಪ್ಪ

*ದೊಡ್ಡವರೆಲ್ಲ ಜೈಲಿಗೆ ಹೋಗುವುದನ್ನು ನೋಡಿ ನನಗೂ ಧೈರ್ಯ ಬಂದಿದೆ, ಏನು ಮಾಡಲಿ?*



ಧೈರ್ಯವಾಗಿ ಹೋಗಿ. ಮುಂದಿನ ಚುನಾವಣೆಗೆ ಟಿಕೆಟ್ಟೂ ಸಿಗಬಹುದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಸೆರೆಮನೆಯಿಂದ ಬಂದವರೆಲ್ಲಾ ಭಗವಾನ್ ಶ್ರೀಕೃಷ್ಣ ಎಂದುಕೊಂಡರೆ?*

ದನ ಮೇಯಿಸಲು ಕಳಿಸಿ; ಭ್ರಮೆ ತಾನಾಗಿಯೇ ಕರಗುತ್ತದೆ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಶತಾಯುಷಿಯೊಬ್ಬರಿಗೆ ಸಾಯುವುದಕ್ಕೂ ಪುರುಸೊತ್ತಿಲ್ಲವಂತೆ; ನಿಮ್ಮ ಸಲಹೆ?*

ಗುಡ್; ದೇಹದ ಬಿಸಿ ಇರುವವರೆಗೆ ಹೀಗೇ busy ಆಗಿರಿ!

ಎ.ಎಸ್. ಸ್ವಾಮಿ, ಶೋರಾಪುರ

*ಸರಳ ಜೀವನದ ಸೂತ್ರಗಳಾವುವು?*

ಸರಳುಗಳ ಹಿಂದೆ ಹೋಗದಂತೆ ಜೀವಿಸುವುದು.

ಶ್ರೀಮತಿ ವಿಜಯ, ಮೈಸೂರು

*ಟಿವಿಯಲ್ಲಿ ಬರುವ ಅಡಿಗೆ ಸೀರಿಯಲ್‌ಗಳನ್ನು ಕಂಡರೆ ನನ್ನವರಿಗೆ ಎಲ್ಲಿಲ್ಲದ ಕೋಪ. ಹೀಗೇಕೆ?*



ಪಾಪ! ಹೊಸರುಚಿಗಳ ಪಾಕಶೂಲೆ, ಪತಿಯು ತಾನೆ ಬಲಿಯ ಪಶುವು, ಟೇಸ್ಟು ಟೆಸ್ಟು ಮಾಡಿ ಹೊಟ್ಟೆ ತೊಟ್ಟಿಯಾಯಿತು ಎಂದು ಮೊನ್ನೆ ಅಲವತ್ತುಕೊಂಡರು!

ಶರ್ವಾಣಿ, ಮೈಸೂರು

*ಕವಿಗೆ ಕವಿ ಮುನಿವಂ; ರಾಜಕಾರಣಿಗೆ ರಾಜಕಾರಣಿ...?*

ಸದನದೊಳ್ ಮುನಿವಂ, ರೆಸಾರ್ಟಿನೊಳ್ ಒಲಿವಂ.

ಎಂ.ಜಿ.ಶಿವರಾಂ, ಬೆಂಗಳೂರು

*ಕಂಬಾರರು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡರು ಎಂದೇ ಎಲ್ಲರೂ ಹೇಳುತ್ತಾರಲ್ಲಾ...?*

ಪಡೆದರು ಎಂಬುದು ಶುದ್ಧ ತಪ್ಪು; ಕೊಂಡರು ಎನ್ನುವುದು ಶುದ್ಧ ಸುಳ್ಳು. ಪುರಸ್ಕೃತರಾದರು ಎಂಬುದೊಂದೇ ಸತ್ಯ!

ಆರ್. ಮಧುಸೂದನ್, ಹಾಸನ

*ಮೊಬೈಲ್ ಬಳಸದ, ಟಿವಿ ನೋಡದ, ಚಿನ್ನದ ಆಸೆ ಇಲ್ಲದ ಚೆಲುವೆ ವಧುವಾಗಿ ಸಿಗುವಳೆ?*

ಅಂಡಮಾನ್‌ನ ಪ್ರಾಚೀನ ಬುಡಕಟ್ಟು ಜನಾಂಗದಲ್ಲಿ ಪ್ರಯತ್ನಿಸಿ!

ಪಿ.ಜೆ. ರಾಘವೇಂದ್ರ, ಮೈಸೂರು

*ವಿವಿಧತೆಯಲ್ಲಿ ಏಕತೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡಿ?*

ಟಿವಿ ನಿರೂಪಕಿಯರು ವೇಷದಲ್ಲಿ ವಿವಿಧತೆ, ಭಾಷೆಯಲ್ಲಿ ಅದೇ ಹುಚ್ಚಾರಣೆಯ ಏಕತೆ!

ಪಿ.ವಿ. ಆಚಾರ್ಯ, ಬೆಂಗಳೂರು

*ಹಗರಣದಲ್ಲಿ ಸಿಲುಕದೆ ಭೂಮಿ, ಹಣ ಸ್ವಾಹಾ ಮಾಡುವ ವಿಧಾನ ಎಂಬ ಪುಸ್ತಕ ಬರೆದಿದ್ದೇನೆ. ಮುನ್ನುಡಿ ಬರೆದುಕೊಡುವಿರಾ?*

ಅದಕ್ಕೆ ನಾನು ಅರ್ಹನಲ್ಲ; ಕಾಂಗ್ರೆಸ್, ಬಿಜೆಪಿಯಲ್ಲಿ ಪ್ರಯತ್ನಿಸಿ!

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಜೈಲು - ಇದರ ನಿಜವಾದ ಅರ್ಥ?*

ರಾಜಕೀಯ ಪುನರ್ವಸತಿ ಕೇಂದ್ರ!

ಮಹಾವೀರ ಕಾಸರ, ಶಿವಮೊಗ್ಗ

*ಪ್ರೇಮಿಗಳ ತುಟಿಯಲ್ಲಿರುವುದು ಯಾವ ಜೇನು?*

ತಿಳಿಯೋಣ ಎಂದರೆ ಯಾವ ಪ್ರೇಮಿಗಳೂ ನನಗೆ ಚಾನ್ಸೇ ಕೊಟ್ಟಿಲ್ಲ ನೋಡ್ರಿ!

ಎಂ.ಎನ್. ಸೋಮಶೇಖರ್, ಮೈಸೂರು

*ವ್ಯಕ್ತಿಯ ನಿಜವಾದ ಬೆಲೆ ಅವನು ಸತ್ತ ನಂತರವೇ ತಿಳಿಯುತ್ತದೆ, ಏಕೆ?*

ಇನ್ಶೂರೆನ್ಸ್ ಹಣ. ಎಫ್‌ಡಿಯ ಬಡ್ಡಿ, ಎಸ್‌ಬಿ ಅಕೌಂಟ್ ಹಣದ ಲೆಕ್ಕ ಹಾಕುವುದು ಸತ್ತ ನಂತರವೇ ಅಲ್ಲವೇ!

ರಾಜೇಂದ್ರ ಹೆಗಡೆ, ಹಾವೇರಿ

*ಮಹಿಳೆ, ಪುರುಷ, ರಾಜಕಾರಣಿ, ಸನ್ಯಾಸಿಗಳಲ್ಲಿ ಅರಿಷಡ್ವರ್ಗಗಳು ಮತ್ತು ಸಂಶಯವನ್ನು ಮೊದಲು ಯಾರು ಬಿಡುತ್ತಾರೆ?*

ಯಾರು ಮೊದಲು ಕೋಮಾ ಸ್ಟೇಜ್ ತಲುಪುತ್ತಾರೋ ಅವರೇ!

## ಬಹುಮಾನಿತ ಪ್ರಶ್ನೆ

ಭಾನುಮತಿ ಭೋಜರಾಜ್

*ರಾಜೀನಾಮೆ ಕೊಡುವಾಗ, ಜೈಲಿಗೆ ಹೋಗುವಾಗ ಮುಹೂರ್ತ ನೋಡುವವರು ಭೂಮಿ, ಹಣ ನುಂಗುವಾಗ ಏಕೆ ಮುಹೂರ್ತ ನೋಡುವುದಿಲ್ಲ?*

ಮುಹೂರ್ತ ಇಟ್ಟುಕೊಡುವವನೂ ಪಾಲು ಕೇಳುತ್ತಾನೆಂಬ ಭಯ!

ವಿ. ಹೇಮಂತಕುಮಾರ್, ಬೆಂಗಳೂರು

*ಹಂತಕನಿಗೂ, ಚಿಂತಕನಿಗೂ ಏನು ವ್ಯತ್ಯಾಸ?*

ಹಂತಕನಿಗೆ ಶಸ್ತ್ರ ಮುಖ್ಯ; ಚಿಂತಕನಿಗೆ ಶಾಸ್ತ್ರ ಮುಖ್ಯ.

ಹೆಚ್.ಆರ್. ಕಡಿವಾಲ, ಬದಾಮಿ

*ಮನುಷ್ಯನಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎನ್ನುತ್ತಾರಲ್ಲಾ...?*

ಹೌದೇ? ಹಾಗಾದರೆ ಚಿರಯುವಕನಾಗಿರಲು ಏನಂತೆ ದಾಡಿ?

ನರಸಿಂಹ ಎಂ. ಪೈ, ಕಾಸರಕೋಡ

*ನಾವು ತಂದೆಯನ್ನು ಬಹುವಚನದಲ್ಲೂ, ದೇವನನ್ನು ಏಕವಚನದಲ್ಲೂ ಕರೆಯುತ್ತೇವೆ, ಏಕೆ?*

ಎದುರಿಗೆ ಕಾಣುವವರಿಗೆ ಮಾತ್ರ ಮರ್ಯಾದೆ ಕೊಡುವುದು ನಮ್ಮ ಪದ್ಧತಿ!

ಪದ್ಮಜಾ ಸುಂದರೇಶ್, ಮೈಸೂರು

*ಹೆಣ್ಣು ಮದುವೆಗೆ ಮೊದಲು ಒಂದು ರಹಸ್ಯ, ನಂತರ ಸಮಸ್ಯೆ. ಗಂಡು?*



ಎಂದಿಗೂ ಹೆಣ್ಣಿನ ಹಿಂಬಾಲಕ, ಚಾಲಕ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಅಪನಂಬಿಕೆಗೂ, ಮೂಢನಂಬಿಕೆಗೂ ಇರುವ ವ್ಯತ್ಯಾಸವೇನು ಗುರೂಜಿ?*

ಅಪನಂಬಿಕೆ ಪತ್ತೇದಾರರ ಬಂಡವಾಳ, ಮೂಢನಂಬಿಕೆ ಜೋತಿಷಿಗಳ ಬಂಡವಾಳ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಜಾಹೀರಾತಿನ ಆಸೆಗೆ ಪತ್ರಿಕೆಗಳು ತಮ್ಮ ಮುಖಪುಟವನ್ನೇ ಮಾರಿಕೊಳ್ಳುತ್ತಿವೆಯಲ್ಲಾ...?*

ಅದೆಷ್ಟೋ ವಾಸಿ ಬಿಡಿ, ಹಣದ ಆಸೆಗಾಗಿ ಎಷ್ಟೋ ಪತ್ರಿಕೆಗಳು ಪತ್ರಿಕಾನಿಷ್ಠೆಯನ್ನೇ ಮಾರಿಕೊಂಡಿವೆ!

■ ರಾಮ್